21) Mainal 22) Kariamepalli 23) Batshethike 24) Havnoda 25) Bandoda 26) Titwali 27) Kukra-Kurwade 28) Shirgure 29) Ghavanie 30) Kodli 31) Bapeli 32) Phanaskhar 33) Sulavali 34) Panjeli 35) Chapoli 36) Samjoida 37) Kateli 38) Joida 39) Konshet 40) Chandwadi 41) Viliyedabe 42) Kamre 43) Kalamboli 44) Kunigini 45) Kuni-Bazarkunanga 46) Aveda-poppal-wadi 47) Viral 48) Vaini 49) Karnjoida 50) Asulli 51) Nagoda 52) Deirya 53) Devalli 54) Ivoli 55) Panjeli 56) Badgund 57) Birampali 58) Mavalinge 59) Kateli 60) Katel 61) Zalewalli 62) Kundel 63) Bor-Bor-Bo-Geger 64) Kenchanalli 65) Kadra 66) Virje 67) Kaiga 68) Devakar 69) Hartoga 70) Birkhol 71) Balemane 72) Kuchegar 73) Kodasalli 74) Barballi 75) Birkhol 76) Kattige 77) Kalache 78) Neiturage 79) Yermukh 80) Shivapur 81) Shivalli.

2. 85,119-00 acres of land submerged under the above project.

3. 2437 families have lost their lands

4. Rs. 7,76,32,646/-

5. 340 persons

6. No.

ವಿಷಯ : ಮಳವಳ್ಳಿ ಟೌನ್‌ನಲ್ಲಿ ಕೆ. ಎಸ್. ಆರ್. ಟಿ. ಸಿ. ಬಸ್ ನಿಲ್ದಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೩೩ (೧೦೩೬)

ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಳವಳ್ಳಿ ಟೌನ್‌ನಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮಾಡಲು ಸರ್ಕಾರಕ್ಕೆ ಮನವಿ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಹಣ ಮಂಜೂರಾಗಿದೆಯೇ ? ಮಂಜೂರಾಗಿದ್ದಲ್ಲಿ ಎಷ್ಟು ಮತ್ತು ಯಾವಾಗ ಕೆಲಸ ಪ್ರಾರಂಭ ಮಾಡಲಾಗುವುದು.

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಹೌದು.

ಆ) ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ನಿವೇಶನದ ಬೆಲೆ ನಿಷ್ಕರ್ಷೆಯಾಗಿದೆ. ಆದರೆ ಇದಕ್ಕೆ ಜಿಲ್ಲಾ ಧಿಕಾರಿಗಳ ಆದೇಶವನ್ನು ನಿರೀಕ್ಷಿಸಲಾಗಿದೆ. ಇವರ ಆದೇಶ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಿಷಯ :– ಮಂಡ್ಯ ಜಿಲ್ಲೆಯಲ್ಲಿ ಬರ ಪರಿಹಾರದ ವೆಚ್ಚ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 694 (1039)

ಶ್ರೀ ಕೆ. ಎಂ. ಪುಟ್ಟು (ಕಿರುಗಾವಲು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ಜಿಲ್ಲೆಯಲ್ಲಿ ಯಾವ ಯಾವ ಪ್ರದೇಶಗಳಲ್ಲಿ ಬರಗಾಲ ಪೀಡಿತ ಪ್ರದೇಶಗಳೆಂದು ಗುರುತಿಸಲಾಗಿದೆ ?

ಆ) ಈ ಪ್ರದೇಶಗಳಲ್ಲಿ ಇದುವರೆಗೆ ಕೈಕೊಂಡಿರುವ ಬರ ಪರಿಹಾರ ಕಾಮಗಾರಿಗಳು ಯಾವುವು? (ವಿವರಗಳನ್ನು ನೀಡುವುದು)

ಇ) ಈ ಕಾಮಗಾರಿಗಳಿಗಾಗಿ ಇದುವರೆಗೆ ಮಾಡಿರತಕ್ಕಂಥ ವೆಚ್ಚವೆಷ್ಟು, ಈ ವರ್ಷದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಮೀಸಲಾಗಿಡಲಾಗಿದೆ ಹಾಗೆ ಎಷ್ಟು ಹಣವನ್ನು ಇದಕ್ಕಾಗಿ ವ್ಯಯ ಮಾಡಲಾಗಿದೆ (ವಿವರ ಗಳನ್ನು ನೀಡುವುದು)

ಈ) ಯಾವ ತಾಲ್ಲೂಕುಗಳಲ್ಲಿ ಶಾಶ್ವತವಾಗಿ ಬರ ಪರಿಹಾರ ಕಾಮಗಾರಿಗಳನ್ನು ಮುಂದುವರಿಸಿ ಕೊಂಡು ಬರಲಾಗುತ್ತಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಮಂಡ್ಯ ಜಿಲ್ಲೆಯ ಏಳು ತಾಲ್ಲೂಕುಗಳ ಸುಮಾರು 961 ಗ್ರಾಮಗಳ ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿ ಇರುವುದಾಗಿ ಗುರುತಿಸಿದೆ.

ಆ) ಕುಡಿಯುವ ನೀರಿನ ಪೂರೈಕೆ, ಮೇವು ಪೂರೈಕೆ, ಉಚಿತ ಬಿತ್ತನೆ ಬೀಜಗಳ ವಿತರಣೆ, ಪೌಷ್ಟಿಕ ಆಹಾರ ಪೂರೈಕೆ ಮತ್ತು ಉದ್ಯೋಗ ಸೃಜನೆ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಇ)

ಪರಿಹಾರ ಕಾರ್ಯ	ವೆಚ್ಚ (ಲಕ್ಷ ರೂ.ಗಳಲ್ಲಿ)	ಬಿಡುಗಡೆ
1) ಕುಡಿಯುವ ನೀರಿನ ಪೂರೈಕೆ	15.24	27.00
2) ಉದ್ಯೋಗ ಸೃಜನೆ	24.40	67.00
3) ಮೇವು ಪೂರೈಕೆ	1.59	3·00
4) ಬಿತ್ತನೆ ಬೀಜ ವಿತರಣೆ	1.00	1.00
5) ಪೌಷ್ಟಿಕ ಆಹಾರ ಪೂರೈಕೆ	1.00	1·00
ಒಟ್ಟು :	43.23	99.00

ಈ) ಎಲ್ಲಾ ಏಳು ತಾಲ್ಲೂಕುಗಳಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿದೆ.